ಎಸ್.ಎಂ. ಶಿವಕುಮಾರ್, ವಿಶೇಷ ಭೂ ಸ್ವಾಧೀನಾಧಿಕಾರಿ-2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು. ಹಾಗೂ ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ, ನಂ.11, ಬ್ಲೂಕ್ರಾಸ್ ಛೇಂಬರ್ಸ್, ಇನ್‌ಫೆಂಟ್ರಿ ಅಡ್ಡರಸ್ತೆ, ಬೆಂಗಳೂರು-560001. ಇವರ ನಡವಳಿಗಳು.

# ಪದಾಧಿಕಾರಿಗಳ ಚುನಾವಣಾ ನೋಟೀಸ್

(ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 14-ಎಜಿ ರಂತೆ)

ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ, ನಂ.11, ಬ್ಲೂಕ್ರಾಸ್ ಛೇಂಬರ್ಸ್, ಇನ್‌ಫೆಂಟ್ರಿ ಅಡ್ಡರಸ್ತೆ, ಬೆಂಗಳೂರು-560001. ಈ ಮಹಾಮಂಡಳದ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಯ ಆಡಳಿತ ಮಂಡಲಿಗೆ ದಿನಾಂಕ : 04-11-2024 ರಂದು ನಿಗಧಿಯಾಗಿದ್ದ ಚುನಾವಣೆಯಲ್ಲಿ, ಅವಿರೋಧವಾಗಿ ಚುನಾಯಿತರಾದ ನಿರ್ದೇಶಕರುಗಳಲ್ಲಿ, ಪದಾಧಿಕಾರಿಗಳ ಚುನಾವಣೆ ನಡೆಸಲು ದಿನಾಂಕ : 11-11-2024 ಸೋಮವಾರ ಮಧ್ಯಾಹ್ನ 01.00 ಘಂಟೆಗೆ ಮಹಾಮಂಡಳದ ಕೇಂದ್ರ ಕಛೇರಿಯಲ್ಲಿ ಸಭೆಯನ್ನು ನಿಗಧಿಪಡಿಸಲಾಗಿದೆ. ಸದರಿ ದಿನದಂದು ನಡೆಯುವ ಪದಾಧಿಕಾರಿ ಸ್ಥಾನಗಳ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಹಾಗೂ ಸಭೆಗೆ ಹಾಜರಾಗಲು ತಿಳಿಸಿದೆ. ಚುನಾವಣಾ ವೇಳಾಪಟ್ಟಿಯು ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ವಿವರ | ದಿನಾಂಕ ಮತ್ತು ವೇಳೆ | ಕ.ಸ.ಸಂ. ನಿಯಮಗಳ ಸಂಖ್ಯೆ |
|---|---|---|---|
| 1 | ನಾಮಪತ್ರ ಸಲ್ಲಿಕೆ | ದಿನಾಂಕ :11-11-2024 ರ ಸೋಮವಾರ ಬೆಳಿಗ್ಗೆ 09.00 ರಿಂದ 11.00 ರವರೆಗೆ | ನಿಯಮ 14 ಎಜಿ (4) |
| 2 | ನಾಮಪತ್ರ ಪರಿಶೀಲನೆ | ದಿನಾಂಕ :11-11-2024 ರ ಸೋಮವಾರ ಸಭೆ ಪ್ರಾರಂಭವಾದ ನಂತರ | ನಿಯಮ 14 ಎಜಿ (7) |
| 3 | ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ :11-11-2024 ರ ಸೋಮವಾರ ನಾಮಪತ್ರಗಳ ಪರಿಶೀಲನೆ ನಂತರ | ನಿಯಮ 14 ಎಜಿ (7) |
| 4 | ನಾಮಪತ್ರ ವಾಪಸ್ಸು ಪಡೆಯುವುದು. | ದಿನಾಂಕ :11-11-2024 ರ ಸೋಮವಾರ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ ನಂತರ 30 ನಿಮಿಷಗಳ ಕಾಲ | ನಿಯಮ 14 ಎಜಿ (8) & (9) |
| 5 | ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ | ದಿನಾಂಕ :11-11-2024 ರ ಸೋಮವಾರ ನಾಮಪತ್ರಗಳ ವಾಪಸ್ಸು ಪಡೆಯಲು ನೀಡಿದ ಅವಧಿಯ ನಂತರ | ನಿಯಮ 14 ಎಜಿ (12) |
| 6 | ಅಗತ್ಯವಾದಲ್ಲಿ ಪದಾಧಿಕಾರಿಗಳ ಚುನಾವಣೆ | ದಿನಾಂಕ :11-11-2024 ರ ಸೋಮವಾರ ಮಧ್ಯಾಹ್ನ 02.00 ರಿಂದ 3.00 ಗಂಟೆ | ನಿಯಮ 14 ಎಜಿ (13) & (14) |
| 7 | ಫಲಿತಾಂಶ ಪ್ರಕಟಣೆ | ದಿನಾಂಕ :11-11-2024 ರ ಸೋಮವಾರ ಮತದಾನದ ನಂತರ | ನಿಯಮ 14 ಎಜಿ (16) |



Scanned with OKEN Scanner

**: ಸೂಚನೆಗಳು :**

1. ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಕ್ಕೆ ಉಮೇದುವಾರರಾಗಲು ಇಚ್ಛಿಸುವ ಆಡಳಿತ ಮಂಡಳಿಯ ಅರ್ಹ ನಿರ್ದೇಶಕನು ತನ್ನ ನಾಮಪತ್ರವನ್ನು ನಮೂನೆ **XXIV** ರಲ್ಲಿ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸುವುದು.
2. ಅಂತಹ ನಾಮಪತ್ರವು ಆಡಳಿತ ಮಂಡಳಿಯ ಒಬ್ಬ ನಿರ್ದೇಶಕನಿಂದ ಸೂಚಿತವಾಗಿ ಮತ್ತು ಇನ್ನೊಬ್ಬ ಆಡಳಿತ ಮಂಡಳಿಯ ನಿರ್ದೇಶಕನಿಂದ ಅನುಮೋದಿತವಾಗಿರತಕ್ಕದ್ದು.
3. ನಿರ್ದೇಶಕರು ಒಂದು ಪದಾಧಿಕಾರಿ ಸ್ಥಾನಕ್ಕಿಂತ ಹೆಚ್ಚಿನ ಸ್ಥಾನಗಳಿಗೆ ಅಭ್ಯರ್ಥಿಯಾಗತಕ್ಕದ್ದಲ್ಲ.
4. ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ ಅಥವಾ ಅನುಮೋದಿಸತಕ್ಕದ್ದಲ್ಲ.
5. ಪದಾಧಿಕಾರಿಯ ಚುನಾವಣೆಯ ಪೂರ್ಣ ಪ್ರಕ್ರಿಯೆಯನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 14 ಎಜಿ ರೀತ್ಯಾ ನಡೆಸಲಾಗುವುದು

ದಿನಾಂಕ : 29-10-2024

ಸ್ಥಳ : ಬೆಂಗಳೂರು

S.M. [signature]

(ಎಸ್.ಎಂ. ಶಿವಕುಮಾರ್)
ವಿಶೇಷ ಭೂ ಸ್ವಾಧೀನಾಧಿಕಾರಿ–2,
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು.
ಹಾಗೂ ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ,

ರಿಟರ್ನಿಂಗ್ ಅಧಿಕಾರಿ
ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ
ಮಹಾಮಂಡಳ ನಿ.

**ಇವರಿಗೆ :**

ಶ್ರೀ/ಶ್ರೀಮತಿ



Scanned with OKEN Scanner